ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ(ಇತರೆ ಪರೀಕ್ಷೆಗಳು), ಮಲ್ಲೇಶ್ವರಂ, ಬೆಂಗಳೂರು-03

**ಸಂಖ್ಯೆ: ಎಸ್.1/ವಾ.ಪ/ ಫ.ಉ.ಪ/04/2022-23** **ದಿನಾಂಕ: 16/04/2022**

**ಸುತ್ತೋಲೆ**

ವಿಷಯ: ಜನವರಿ-2022ರ ವಾಣಿಜ್ಯ ಪರೀಕ್ಷೆಯ ಫಲಿತಾಂಶ ಉತ್ತಮ ಪಡಿಸಿಕೊಳ್ಳುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಜನವರಿ-2022ರ ವಾಣಿಜ್ಯ ಪರೀಕ್ಷೆಯ ಫಲಿತಾಂಶವನ್ನು ಈಗಾಗಲೇ ಮಂಡಳಿಯ ಜಾಲತಾಣದಲ್ಲಿ ಪ್ರಕಟಿಸಲಾಗಿದೆ. ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಇಚ್ಛಿಸುವ ಅಭ್ಯರ್ಥಿಗಳು ದಿನಾಂಕ: 05/05/2022ರೊಳಗೆ ಸಂಬಂಧಿಸಿದ ವಾಣಿಜ್ಯ ಸಂಸ್ಥೆಯ ಮುಖಾಂತರ ಅರ್ಜಿ ಸಲ್ಲಿಸುವುದು. ಉತ್ತೀರ್ಣರಾದ ಎರಡು ವರ್ಷದೊಳಗೆ ಮಾತ್ರ ಅರ್ಜಿಸಲ್ಲಿಸಲು ಅವಕಾಶ ನೀಡಲಾಗಿದೆ. ಅಂದರೆ ಜನವರಿ-2020 ಮತ್ತು ನಂತರದ ವಾಣಿಜ್ಯ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಮಾತ್ರ ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಅರ್ಜಿ ಸಲ್ಲಿಸಬಹುದಾಗಿದೆ.

1. ಫಲತಾಂಶ ಉತ್ತಮ ಪಡಿಸಿಕೊಳ್ಳಲು ಈ ಮುಂಚೆ ಹಾಜರಾಗಿದ್ದ ವಾಣಿಜ್ಯ ಸಂಸ್ಥೆಯಿಂದಲೇ ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಅರ್ಜಿ ಸಲ್ಲಿಸುವುದು.
2. ಜನವರಿ-2022ರ ವಾಣಿಜ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಇಚ್ಛಿಸಿದಲ್ಲಿ ಜನವರಿ-2022ರ ಫಲಿತಾಂಶ ಪಟ್ಟಿ ಲಗತ್ತಿಸುವುದು.
3. ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಬಯಸುವ ಅಭ್ಯರ್ಥಿಗಳು ಮೂಲ ಅಂಕಪಟ್ಟಿಯನ್ನು ಅರ್ಜಿಯೊಂದಿಗೆ ಸಲ್ಲಿಸುವುದು.
4. ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ನಿಗಧಿಪಡಿಸಿದ ಶುಲ್ಕ ರೂ. 100-00 (ಒಂದು ನೂರು ರೂಪಾಯಿಗಳು) ಗಳನ್ನು ಮಂಡಳಿಯ ಇತರೆ ಪರೀಕ್ಷೆಗಳ ವಿಭಾಗಕ್ಕೆ ಪಾವತಿಸಿದ ನೆಫ್ಟ್ ಚಲನ್ ಸಲ್ಲಿಸುವುದು.
5. ಫಲಿತಾಂಶ ಉತ್ತಮ ಪಡಿಸಿಕೊಳ್ಳುವ ಸಂಬಂಧ ಈಗಾಗಲೇ ಅರ್ಜಿ ಸಲ್ಲಿಸಿದ್ದು, ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಸಾಧ್ಯವಾಗದೇ ಹಿಂದಿನ ಪರೀಕ್ಷೆಗಿಂತ ಕಡಿಮೆ ಅಂಕಗಳು ಬಂದಿದ್ದಲ್ಲಿ/ಅನುತ್ತೀರ್ಣರಾಗಿದ್ದಲ್ಲಿ, ಕಡಿಮೆ ಅಂಕದ ಅಂಕಪಟ್ಟಿಯನ್ನು/ಫಲಿತಾಂಶ ಪಟ್ಟಿಯನ್ನು ಸಂಸ್ಥೆಯ ಮುಖಾಂತರ ಸಲ್ಲಿಸಿ, ಮಂಡಳಿಗೆ ಮನವಿ ಸಲ್ಲಿಸಿ, ಮೂಲ ಪ್ರಮಾಣ ಪತ್ರವನ್ನು ಪಡೆದುಕೊಳ್ಳುವುದು.
6. ವಾಣಿಜ್ಯ ಶಾಲೆಯ ಮುಖ್ಯಸ್ಥರು ಫಲಿತಾಂಶ ಉತ್ತಮ ಪಡಿಸಿಕೊಳ್ಳುವ ಸಂಬಂಧ ಮಂಡಳಿಯಿಂದ ನೀಡಲಾದ ಅನುಮತಿ ಪತ್ರದ ಸಂಖ್ಯೆಯನ್ನು ಅಭ್ಯರ್ಥಿಯ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಅರ್ಜಿ ತುಂಬುವ ಸಮಯದಲ್ಲಿ ಕಡ್ಡಾಯವಾಗಿ ಭರ್ತಿಮಾಡುವುದು.

(ಎಂ.ಆರ್.ಮಾರುತಿ)
ನಿರ್ದೇಶಕರು
(ಇತರೆ ಪರೀಕ್ಷೆಗಳು)

ಪ್ರತಿಯನ್ನು,

1) ಎಲ್ಲಾ ವಾಣಿಜ್ಯ ಶಾಲೆಗಳ ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ,